ಅಪೇಕ್ಷೆಯಂತೆ ವೇಗವಾಗಿ ಹಾಡು ಬದಲಾಯಿಸಲು ಸ್ವಲ್ಪ ಕಷ್ಟವಾಗುತ್ತಿತ್ತು. ಕೆಲವು ಬಾರಿ ಕುಣಿಯುವಾಗ ಒಬ್ಬನ ಕೈ ಮತ್ತೊಬ್ಬನಿಗೆ ತಾಕಿತು ಎಂದೋ, ಕಾಲು ತುಳಿದ ಎಂದೋ ಗಲಾಟೆ ಎಬ್ಬಿಸುವ ಮಂದಿಗೆ ಇಂತಹ ಕಾರ್ಯಕ್ರಮಗಳಲ್ಲಿ ಬರವಿರಲಿಲ್ಲ. ಕೆಲವು ಬಾರಿ ಕೈ ಕೈ ಮಿಲಾಯಿಸಿ ಹೊಡೆದಾಟವಾಗಿದ್ದು ಉಂಟು. ಕುಡಿದ ಹುಮ್ಮಸ್ಸಿನಲ್ಲಿ ತಮ್ಮ ದೇಹವನ್ನು ವಿಶಿಷ್ಟವಾಗಿ ಕುಣಿಸುವ ದೃಶ್ಯವನ್ನು ನೋಡುವಾಗ ಕೆಲವು ಬಾರಿ ನನಗೆ ಕುಣಿಯಬೇಕು ಎನ್ನಿಸಿಬಿಡುತ್ತಿತ್ತು. ಕಾಲುಗಳು ನಿಧಾನಕ್ಕೆ ಚಲಿಸಿದಾಗ ನನ್ನನ್ನು ನಾನು ಹತೋಟಿಗೆ ತಂದು ಸುಮ್ಮನಾಗುತ್ತಿದ್ದೆ. ಮತ್ತೆ ಕೆಲವು ಬಾರಿ ಕುಣಿತದ ಹಾವಭಾವ ಕಂಡು ನಕ್ಕು ನಕ್ಕು ಸಾಕಾಗಿದ್ದು ಉಂಟು.

ಇನ್ನು ಬಾಪನ ಆಟೋ ರಿಕ್ಷಾದ ಕ್ಯಾರಿಯರ್‌ಗೆ ಅಜೀಜ್ ಅಣ್ಣನ ಕೊಳಾಂಬಿಯಾಕಾರದ ಧ್ವನಿವರ್ಧಕವನ್ನು ಕಟ್ಟಿ ಮೈಕ್‌ನಲ್ಲಿ ಜೋರಾಗಿ ಯಾವುದೋ ಪಕ್ಷದ ವಕ್ತಾರನಂತೆ 'ಮಾನ್ಯ ಮತದಾರ ಬಾಂಧವರಲ್ಲಿ ವಿನಂತಿ' ಎಂದೋ, 'ಗ್ರಾಮಪಂಚಾಯಿತಿಯ ಗ್ರಾಮಸಭೆಗೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆ ಯಶಸ್ವಿಗೊಳಿಸಿಕೊಡಬೇಕಾಗಿ ಮನವಿ' ಎಂದೋ, 'ದೇವಸ್ಥಾನದ ಮಹಾಪೂಜೆಗೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರಕೃಪೆಗೆ ಪಾತ್ರವಾಗಬೇಕಾಗಿ ಪ್ರಾರ್ಥನೆ' ಎಂದೋ, 'ಮಸೀದಿಯ ಪ್ರಭಾಷಣ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಅಲ್ಲಾಹ್‌ನ ದಯೆಗೆ ಪಾತ್ರವಾಗಬೇಕಾಗಿ ಮನವಿ' ಎಂದೋ ಕರೆಕೊಡುವ ಅನೌನ್ಸ್‌ಮೆಂಟ್‌ನ (ಡಂಗೂರಗಾರನ) ಕೆಲಸವನ್ನು ನಾನು ಪ್ರೌಢಶಾಲೆಯಲ್ಲಿರುವಾಗಲೇ ಮಾಡಲಾರಂಭಿಸಿದ್ದೆ. ಅಂದರೆ ಹಳೆಯ ಕಾಲದಲ್ಲಿ ಡಂಗೂರ ಸಾರುವ ಡಂಗೂರಗಾರನ ಕೆಲಸ ಇದು. ನನ್ನ ಕೈಯಲ್ಲಿ ಡಂಗೂರ ಇರಲಿಲ್ಲ; ಬದಲಾಗಿ ಮೈಕ್ ಇತ್ತು.

